ವ್ಯವಸ್ಥೆಯೂ ಇಲ್ಲ. ಇದರ ಬಗ್ಗೆ ನಮ್ಮ ಹತ್ತಿರವೂ ಸಹ ಹಣವಿಲ್ಲ. ಆದ್ದರಿಂದ. ಇದರ ಬಗ್ಗೆ ಹೆಚ್ಚಿನ ಸಹಾಯ ಮಾಡಲಿಕ್ಕೆ ಬಹುಶ: ನಮಗೆ ಸಾಧ್ಯವಿಲ್ಲ ಮತ್ತೆ ಈ ಪರೀಕ್ಷಾ ಕೇಂದ್ರಗಳ ಬಗ್ಗೆ, ತಾವು ಏನು ಹೇಳಿದ್ದೀರಿ, ಆ ಸೂಚನೆಗಳನ್ನು ಗಮನಿಸಿ ಆ ಬಗ್ಗೆ ಸರ್ಕಾರದಿಂದ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರಿಎಸ್.ಷಫಿ ಅಹಮದ್:- ಹೊಸದಾಗಿ ಈ ವರ್ಷ ಇಂಜಿನಿಯರಿಂಗ್ ಕಾಲೇಜುಗಳನ್ನು ಮತ್ತು ಪಾಲಿಟೆಕ್ನಿಕ್‌ಗಳನ್ನು ಕೊಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇವೆ.

ಶ್ರಿ ಎಂ.ವೀರಪ್ಪ ಮೊಯಿಲಿ:- ಈ ಬಗ್ಗೆ ಸರ್ಕಾರ ಇಷ್ಟರವರೆಗೆ ಯಾವ ರೀತಿ ಸ್ವರೂಪದ ನಿರ್ಣಯವನ್ನೂ ತೆಗೆದುಕೊಂಡಿಲ್ಲ.

ಛೇರ್ಮನ್:- ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಷಯ:- ರಾಜ್ಯ ಕೃಷಿ ಭೂ ಅಭಿವೃದ್ಧಿ ಬ್ಯಾಂಕಿನಿಂದ ಟ್ರ್ಯಾಕ್ಟರ್‌ಗಳನ್ನು ಖರೀದಿಸಲು ಸಾಲ ಮಂಜೂರಾತಿ ಮಾಡುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 424 (2186)

ಶ್ರಿ ಆರ್.ಎಲ್.ಜಾಲಪ್ಪ (ದೊಡ್ಡಬಳ್ಳಾಪುರ):- ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ ರಾಜ್ಯ ಕೃಷಿ ಭೂ ಅಭಿವೃದ್ಧಿ ಬ್ಯಾಂಕಿನಿಂದ 1986 ರಿಂದ ಇಲ್ಲಿಯವರೆಗೆ ಕೊಟ್ಟ ಸಾಲ ಎಷ್ಟು (ವರ್ಷವಾರು ವಿವರಗಳನ್ನು ನೀಡುವುದು)

ಆ ಈ ಒಂದು ಸಾಲದ ಮೊತ್ತದಲ್ಲಿ ಟ್ರಾಕ್ಟರುಗಳಿಗಾಗಿ ಕೊಟ್ಟಿರುವ ಸಾಲ ಎಷ್ಟು ಹಾಗೂ ಈ ಸಾಲದ ಹಣದಲ್ಲಿ ಎಷ್ಟು ಟ್ರಾಕ್ಟರುಗಳನ್ನು ಖರೀದಿಸಬಹುದು.

ಇ ಸಾಲ ವಸೂಲು ಶೇಕಡಾ ಎಷ್ಟು ಆಗಿದೆ ಹಾಗೂ ಟ್ರಾಕ್ಟರ್ ಸಾಲಗಾರರಿಂದ ಬರಬೇಕಾಗಿರುವ ಸುಸ್ತಿ ಹಣ ಎಷ್ಟು ?

ಶ್ರಿ ಎಸ್.ಆರ್.ಮೊರೆ (ಸಹಕಾರ ರಾಜ್ಯ ಸಚಿವರು)-/

ಅ ಒಟ್ಟು ರೂ. 43,845-72 ಲಕ್ಷಗಳು

ವರ್ಷ	ರೂಪಾಯಿ ಲಕ್ಷಗಳಲ್ಲಿ
1985-86	4686.90
1986-87	5254.59
1987-88	4276-60
1988-89	9080-16
1989-90	7639-16
1990-91	7216-54
1991-92	5691-77

ಜನವರಿ 92ರವರೆಗೆ	43,845-72

ಆ ಟ್ರಾಕ್ಟರುಗಳಿಗಾಗಿ ಸಾಲ ರೂ.8963.41 ಲಕ್ಷಗಳು. ಖರೀದಿಸಬಹುದಾದ ಟ್ರಾಕ್ಟರುಗಳ ಸಂ. 6908

ಇ ಟ್ರಾಕ್ಟರ್ ಸಾಲ ಸರಾಸರಿ ವಸೂಲಾತಿ ಶೇಕಡ 46.08 ಟ್ರಾಕ್ಟರ್ ಸಾಲಗಾರರಿಂದ ಬರಬೇಕಾಗಿರವ ಸುಸ್ತಿ ಹಣ775.03 ಲಕ್ಷ ರೂಪಾಯಿಗಳು.

ವಿಷಯ:- ಬೋಧಕ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ 440 (2106)

ಶ್ರೀ ಬಿ.ಹೆಚ್.ಬನ್ನಿಕೋಡ್ (ಹಿರೇಕೆರೂರ್):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ ರಾಜ್ಯ ಸರ್ಕಾರದ ಪ್ರಥಮ ದರ್ಜೆಯ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜುಗಳ ಸಂಖ್ಯೆ ಎಷ್ಟು?

ಆ ಈ ಕಾಲೇಜುಗಳಿಗೆ ಒಟ್ಟು ಅವಶ್ಯವಿರುವ ಬೋಧಕ ಸಿಬ್ಬಂದಿ ಸಂಖ್ಯೆ ಎಷ್ಟು, ಹಾಗೂ ಸದ್ಯ ಖಾಲಿಯಿರುವ ಸಂಖ್ಯೆ ಎಷ್ಟು?

ಇ ಖಾಲಿಯಿರುವ ಬೋಧಕೇತರ ನೌಕರರ ಸಂಖ್ಯೆ ಎಷ್ಟು?

ಈ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ನೌಕರರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ 118

ಆ 3031

335 ಹುದ್ದೆಗಳು ಖಾಲಿ ಇವೆ.

ಇ 451

ಈ 271 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದೆ.

ಉಳಿದ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ:- ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಮೀಟರ್ ತೆಗೆಯುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 439 (2178)

ಶ್ರೀ ಅಜಯ್‌ಕುಮಾರ್ ಸರ್ ನಾಯಕ್ (ಬಾಗಲಕೋಟೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಪಂಪ್‌ಸೆಟ್‌ಗಳಿಗೆ ಮೀಟರ್ ಜೋಡಣೆಯನ್ನು ಯಾವ ವರ್ಷದಿಂದ ತೆಗೆಯಲಾಯಿತು.

ಆ ಮೀಟರ್ ಜೋಡಣೆ ತೆಗೆದ ವರ್ಷದಿಂದ ಪ್ರತಿ ವರ್ಷ ಪಂಪುಸೆಟ್ಟುಗಳ ಸರಾಸರಿ ವಾರ್ಷಿಕ ಬಳಕೆ ಎಷ್ಟು ಯೂನಿಟ್ಟು ಗಳಿಗೆ ನಿಗದಿಪಡಿಸಲಾಗಿದೆ.

ಶ್ರೀ ಎಂ.ರಾಮಪ್ಪ(ಇಂಧನ ರಾಜ್ಯ ಮಂತ್ರಿಗಳು)

ಅ ಮೊದಲು 5 ಅಶ್ವಶಕ್ತಿ ವರೆಗಿನ ಪಂಪ್‌ಸೆಟ್‌ಗಳಿಗೆ ನವೆಂಬರ್ 80ರಲ್ಲಿ, ನಂತರ ಫೆಬ್ರುವರಿ 81ರಿಂದ ಹತ್ತು ಅಶ್ವಶಕ್ತಿವರೆಗಿನ ಪಂಪ್‌ಸೆಟ್‌ಗಳಿಗೆ ಮೀಟರ್ ಜೋಡಣೆಯನ್ನು ತೆಗೆಯಲಾಯಿತು.

ಆ ಮೀಟರ್ ಜೋಡಣೆ ತೆಗೆದ ನಂತರ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಗೆ ಯಾವ ಮಿತಿಯನ್ನು ನಿಗದಿಪಡಿಸಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 25-3-1992ರಲ್ಲಿ ಲಿಖಿತಮೂಲಕ ಉತ್ತರಿಸುವ 22ನೇ ಪಟ್ಟಿಯಲ್ಲಿನ 56 ಪ್ರಶ್ನೆಗಳ